ಅ) ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸುವ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿದೆಯೇ;

ಆ) ಬಂದಿದ್ದಲ್ಲಿ, ಕುಂದಾಪುರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸುವ ಬಗ್ಗೆ ಸರ್ಕಾರದ ನಿಲುವೇನು;

ಇ) 2005–2006ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಈ ಕಾಲೇಜು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿ, ಬಡ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣದಿಂದ ವಂಚಿತರಾಗುವಂತೆ ಕ್ರಮಕೈಗೊಳ್ಳುವುದೇ?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಸ್ಥಳ ಪರಿಶೀಲನಾ ವರದಿಯನ್ನು ಕಳುಹಿಸಿಕೊಡಲು ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು ಇವರಿಗೆ ಸೂಚಿಸಲಾಗಿದೆ.

ಇ) 2005–06ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಲು ಅವಶ್ಯಕತೆ, ಮೂಲಭೂತ ಸೌಕರ್ಯಗಳ ಲಭ್ಯತೆ ಹಾಗೂ ಇಲಾಖೆಯ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

2485(3372) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಕೇಂದ್ರಗಳಲ್ಲಿರುವ ಸರ್ಕಾರಿ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒದಗಿಸಲಾದ ಅಂಬುಲೇನ್ಸ್‌ಗಳಲ್ಲಿ ಶವಗಳನ್ನು ಕೊಂಡೊಯ್ಯ ಬಾರದೆಂದು ಸರ್ಕಾರ ಆದೇಶ ನೀಡಿದೆಯೇ;

ಆ) ಇದರಿಂದಾಗಿ ಬಡವರಿಗೆ ಮೃತಪಟ್ಟ ಶವಗಳನ್ನು ಕೊಂಡೊಯ್ಯಲು ತೊಂದರೆಯಾಗುವುದು ನಿಜವಲ್ಲವೇ;

ಇ) ಹಾಗಿದ್ದರೆ ಮೃತ ಶವಗಳನ್ನು ಅಂಬುಲೆನ್ಸ್‌ಗಳಲ್ಲಿ ಕೊಂಡೊಯ್ಯಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸರ್ಕಾರಿ ಆಸ್ಪತ್ರೆಯಲ್ಲಿ ಆಂಬುಲೆನ್ಸ್‌ನ್ನು ಕೇವಲ ತುರ್ತು ಚಿಕಿತ್ಸೆ ಮತ್ತು ಬೇರೆ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ರೋಗಿಗಳನ್ನು ಸಾಗಿಸಬೇಕಾದ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಲಾಗುತ್ತಿದೆ. ಶವಗಳನ್ನು ಸಾಗಿಸಲು ಬಳಸುತ್ತಿಲ್ಲ. ವೈದ್ಯಕೀಯ ನೀತಿ ಸಂಹಿತೆಯ ಪ್ರಕಾರ ಇದು ನಿಷೇದ.

ಆ) ಶವಗಳನ್ನು ಸಾಗಿಸಲು ನಗರ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳು ಶವ ವಾಹನಗಳನ್ನು ಇಡುತ್ತಿದ್ದು, ಇವುಗಳನ್ನು ಶವ ಸಾಗಿಸಲು ಉಪಯೋಗಿಸುತ್ತಿದ್ದಾರೆ ಗ್ರಾಮೀಣ ಪ್ರದೇಶಗಳಲ್ಲಿ ಈ ಸೌಲಭ್ಯವಿಲ್ಲ.

ಇ) ವೈದ್ಯಕೀಯ ಮಾನದಂಡಗಳಿಗೆ ಹಾಗೂ ನೀತಿ ಸಂಹಿತೆಗೆ ಇದು ವ್ಯತಿರಿಕ್ತವಾಗಿರುವುದರಿಂದ ಸದ್ಯಕ್ಕೆ ಈ ಧೋರಣೆ ಬದಲಾವಣೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

2486(3373) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):–ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅಕ್ರಮ ಜಮೀನು ಸಕ್ರಮ ಕೋರಿ ಅರ್ಜಿ ಸಲ್ಲಿಸಿರುವ ಪ್ರಕರಣಗಳು ಇತ್ಯರ್ಥವಾಗದೇ ಇರುವುದರಿಂದ ರಾಜೀವ್ ಗಾಂಧಿ ಆಶ್ರಯ ಗೋಲ್ಡನ್ ಜುಬಿಲಿ ಗ್ರಾಮೀಣ ವಸತಿ ಸಾಲ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿ ಆಯ್ಕೆಯಾದವರ ಹೆಸರಿನಲ್ಲಿ ಜಮೀನು ಇರಬೇಕೆಂದು ಹೊರಡಿಸಿದ ಸುತ್ತೋಲೆ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಈ ಸುತ್ತೋಲೆಯಿಂದ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗದೇ ಇರುವುದು ನಿಜವೇ;

ಇ) ತಾಲ್ಲೂಕು ಪಂಚಾಯತ್‌ಗಳಿಗೆ ನಿಗದಿಪಡಿಸಿದ ಗುರಿ ಸಾಧಿಸಲು ಸಾಧ್ಯವಾಗದೇ ಇರುವುದರಿಂದ ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳಲು ಉದ್ದೇಶಿಸಿದೆ;

ಈ) ಇಂದಿರಾ ಆವಾಜ್ ಮತ್ತು ಅಂಬೇಡ್ಕರ್, ಐ.ಟಿ.ಡಿ.ಪಿ. ಮನೆಗಳಿಗೆ ಫಲಾನುಭವಿಗಳ ಹೆಸರಿನಲ್ಲಿ ಜಮೀನು ಇರಬೇಕೆಂದು ನಿಯಮ ಇಲ್ಲದಿರುವುದು ನಿಜವೇ;

ಉ) ಹೀಗಿರುವಾಗ ರಾಜೀವ್ ಗಾಂಧಿ ಆಶ್ರಯ ಯೋಜನೆಗಳಿಗೆ ಮಾತ್ರ ಜಮೀನು ಇರಬೇಕೆಂಬುದರ ಉದ್ದೇಶವೇನು;

ಊ) ಹಾಗಿದ್ದರೆ, ಈ ನಿಯಮ ಸಡಿಲಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮನೆ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಅಂಜನಮೂರ್ತಿ (ವಸತಿ ಸಚಿವರು):

ಅ) ಗೋಲ್ಡನ್ ಜುಬಿಲಿ ಗ್ರಾಮೀಣ ವಸತಿ ಸಾಲ ಯೋಜನೆಯು ಬ್ಯಾಂಕರ್‌ಗಳ ಯೋಜನೆಯಾಗಿರುವುದರಿಂದ ಈ ಬಗ್ಗೆ ಯಾವುದೇ ಸುತ್ತೋಲೆ ಹೊರಡಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬ್ಯಾಂಕರ್‌ಗಳ ಯೋಜನೆಯಾಗಿರುವುದರಿಂದ ಯಾವುದೇ ಗುರಿ ನೀಡಿರುವುದಿಲ್ಲ.

ಈ) ಈ ಯೋಜನೆಯಡಿಯಲ್ಲಿ ಸಹ ಫಲಾನುಭವಿಗಳ ಹೆಸರಿನಲ್ಲಿ ನಿಯಮಾನುಸಾರ ನಿವೇಶನ ಇರಬೇಕಾದ್ದು ಅತ್ಯವಶ್ಯಕವಾಗಿದೆ.